ಇದ್ದರೆ ನಾವು ಜನರಿಗೆ ಮೋಸ ಮಾಡಿದಂತೆ ಆಗುತ್ತದೆ. ತಾವು ಇದರ ಬಗ್ಗೆ ಮತ್ತೊಮ್ಮೆ ಮರುಪರಿಶೀಲನೆ ಮಾಡಿ ತಕ್ಷಣ ಒಂದು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು:- ಶ್ರೀಮತಿ ಸುಮಾವಂಸತ್,

ಶ್ರೀ ಡಿ.ಎ. ಚಿನ್ನಪ್ಪ:- ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು:- ನಾವು ಹೇಳುವುದು ಏನೆಂದರೆ, ಮಾನ್ಯ ಕಂದಾಯ ಸಚಿವರೊಂದಿಗೆ ಮಾತನಾಡಿ ಇದನ್ನು ಫೈನಲ್ ಮಾಡಿ.

ನಿಯಮ 334ರ ಮೇರೆಗೆ

(1) ಬೆಳಗಾಂ ಜಿಲ್ಲೆ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ತೊಂದರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ಟ್ರಾನ್ಸ್‌ಫರ್ಮರ್‌ಗಳು ಸುಟ್ಟಿದ್ದು, ಇದರಿಂದಾಗಿ ರೈತರಿಗೆ ತೊಂದರೆಯಾಗಲಿಕ್ಕೆ ಹತ್ತಿರುತ್ತದೆ. ಅಲ್ಲದೆ ಕುಡಿಯುವ ನೀರಿನ ಸರಬರಾಜು ಮಾಡಲೂ ಸಹಾ ಪಿ.ಹೆಚ್.ಇ.ಯವರಿಗೆ ತ್ರಾಸ್ ಆಗಲಿಕ್ಕೆ ಹತ್ತಿರುತ್ತದೆ. ಟ್ರಾನ್ಸ್‌ಫರ್ಮರ್‌ಗಳನ್ನು ಪೂರೈಸಲು ಕೇಳಿದರೆ ಬೆಂಗಳೂರಿನಿಂದ 63 ವೋಲ್ಟೇಜ್ ಮತ್ತು 100 ವೋಲ್ಟೇಜ್‌ನ ಟ್ರಾನ್ಸ್‌ಫರ್ಮರ್‌ಗಳು ಬರುತ್ತಿಲ್ಲ ಎಂದು ಉತ್ತರ ಕೊಡಲಿಕ್ಕೆ ಹತ್ತಿರುತ್ತಾರೆ.

ಇದು ಅಲ್ಲದೆ, ಈ ತಾಲ್ಲೂಕುಗಳಲ್ಲಿ ಐ.ಪಿ.ಸೆಟ್ ಕನೆಕ್ಷನ್ ಕೊಡುವಲ್ಲಿಯೂ ಸಹಾ ತುಂಬಾ ನಿಧಾನವಾಗಲಿಕ್ಕೆ ಹತ್ತಿರುತ್ತಾರೆ. ಕನೆಕ್ಷನ್ ಕೊಡಲು ಕೇಳಿದಾಗ ಉಪಕರಣಗಳನ್ನು ಪೂರೈಸುವಲ್ಲಿ ಬಹಳ ವಿಳಂಬವಾಗುತ್ತದೆಂದು ಉತ್ತರ ಹೇಳುತ್ತಾರೆ.

ಆದಕಾರಣ, ಕೂಡಲೇ ಟ್ರಾನ್ಸ್‌ಫರ್ಮರ್‌ಗಳನ್ನು ಹಾಗೂ ಐ.ಪಿ.ಸೆಟ್ ಉಪಕರಣಗಳನ್ನು ಪೂರೈಸಲು ಆದೇಶ ನೀಡಬೇಕು. ಮತ್ತು ಬೈಲುಹೊಂಗಲ ನಗರದಲ್ಲಿ ವಿದ್ಯುತ್ ಸರಬರಾಜು ಉತ್ತಮ ರೀತಿಯಿಂದ ಮಾಡಲು ಕ್ರಮ ಕೈಗೊಳ್ಳಲು ಆದೇಶ ನೀಡುವುದಾಗಬೇಕು. ಇದು ಅಲ್ಲದೆ, ಸಾದತ್ತಿ ತಾಲ್ಲೂಕು ಯೆಕಿ ರುದ್ರಾಪುರ ತಾಂಡಿಗೆ ಇದುವರೆಗೂ ಎಲೆಕ್ಟ್ರಿಸಿಟಿ ಕೊಟ್ಟಿರುವುದಿಲ್ಲ ಕೂಡಲೇ ಈ ಗ್ರಾಮಕ್ಕೆ ಎಲೆಕ್ಟ್ರಿಸಿಟಿ ಕೊಡಲು ಕ್ರಮ ಕೈಗೊಳ್ಳಬೇಕು ತಮ್ಮ ಮುಖಾಂತರ ಮಾನ್ಯ ವಿದ್ಯುತ್ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

(2) ಬನ್ನೂರು ಕುರಿ ತಳಿಯ ಅಭಿವೃದ್ಧಿ

ಶ್ರೀ ಎಸ್. ತಮ್ಮಣ್ಣ (ಕೆರಗೋಡು):-ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬನ್ನೂರು ಕುರಿ ತಳಿಯು ಬಹಳ ಉತ್ತಮ ತಳಿಯಾಗಿದ್ದು, ಈ ತಳಿಯು ರೈತನಿಗೆ ವರಪ್ರಧಾನವಾಗಿದ್ದು, ಕುರಿ ಸಾಕಾಣಿಕೆಯಲ್ಲಿ ರೈತನಿಗೆ ಲಾಭದಾಯಕವಾಗಿದ್ದು ಆರ್ಥಿಕವಾಗಿ ಅನುಕೂಲಕರವಾಗಿತ್ತು. ಇತ್ತೀಚಿನ ದಿನಗಳಲ್ಲಿ ಬನ್ನೂರು ಕುರಿತಳಿ ನಶಿಸಿ ಹೋಗುತ್ತಾ ಇದೆ. ಈ ತಳಿಯನ್ನು ಪುನರ್ ಅಭಿವೃದ್ಧಿ ಪಡಿಸುವುದು ಅವಶ್ಯವಾಗಿದೆ. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಬನ್ನೂರು ತಳಿಯನ್ನು ನಶಿಸಿ ಹೋಗದಂತೆ ತಡೆಯಲು ಪರಿಹಾರ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಪ್ರತ್ಯೇಕವಾಗಿ ತರಿಸಿ ಕೊಡುತ್ತೇವೆ.

(3) ಹಾಸನದ ಕಿಂಕೊ ಸಂಸ್ಥೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರ್ಪಡೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಅಧ್ಯಕ್ಷರೆ ಹಾಸನದ ಪಟ್ಟಣದಲ್ಲಿರುವ ಕಿಂಕೊ ಕಾರ್ಖಾನೆಯು ಕಳೆದ ಹತ್ತಾರು ವರ್ಷಗಳಿಂದ ನಷ್ಟ ಅನುಭವಿಸುತ್ತಿದ್ದು ಮುಚ್ಚುವ ಸ್ಥಿತಿಗೆ ಬಂದಿದೆ. ಈ ಕಾರ್ಖಾನೆಯಲ್ಲಿ ಸುಮಾರು 350 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಳೆದ 6 ವರ್ಷಗಳಿಂದ ಈ ಕಾರ್ಖಾನೆಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸುಗಳ ಬಾಡಿಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ. ತಿಂಗಳು ಒಂದಕ್ಕೆ 25ಕ್ಕೂ ಮೇಲ್ಪಟ್ಟು ಬಸ್‌ಗಳ ಬಾಡಿ ಕಟ್ಟುತ್ತಿದ್ದಾರೆ. ಮತ್ತು ಈ ಕೆಲಸದಲ್ಲಿ ನಿಪುಣತೆಯನ್ನು ಪಡೆದಿದ್ದಾರೆ. ಹಿಂದೆ ಈ ಕಾರ್ಖಾನೆಯಲ್ಲಿ ವ್ಯವಸಾಯದ ಉಪಕರಣಗಳನ್ನು ತಯಾರಿಸುತ್ತಿದ್ದರು. ಕೆ.ಎಸ್.ಆರ್.ಟಿ.ಸಿ ಗೆ ಬಸ್‌ಗಳ ಬಾಡಿಗಳನ್ನು ಕಟ್ಟಲು ಶುರು ಮಾಡಿದ ಮೇಲೆ, ವ್ಯವಸಾಯದ ಉಪಕರಣಗಳನ್ನು ತಯಾರಿಸುತ್ತಿದ್ದ ಮೆಷಿನ್‌ಗಳನ್ನು ಮಾರಾಟ ಮಾಡಿರುತ್ತಾರೆ. ಬಸ್‌ಗಳ ಬಾಡಿಗಳನ್ನು ಕಟ್ಟುವ ಕೆಲಸವನ್ನು ಮಾತ್ರ ಮಾಡಬೇಕಾಗಿದೆ. ಈ ಕಾರಣಗಳಿಂದ ಹಾಸನದ ಕಿಂಕೊ ಫ್ಯಾಕ್ಟರಿಯನ್ನು ಕೆ.ಎಸ್.ಆರ್.ಟಿ.ಸಿ.ಗೆ ವಹಿಸಿ ಕೊಟ್ಟು ಕಾರ್ಖಾನೆಯ ಉಳಿವಿಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುತ್ತಿದ್ದೇನೆ.

ಹಿಂದೆ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಹಾಸನದಲ್ಲಿ ನಡೆಯುತ್ತಿದ್ದು ಆಗ ಸದರಿ ಕಂಪನಿಯಲ್ಲಿ ವ್ಯವಸಾಯದ ಉಪಕರಣಗಳನ್ನು ತಯಾರಿಸುತ್ತಿತ್ತು. 1975ರಲ್ಲಿ ಬೆಂಗಳೂರಿನ ಸರ್ಕಾರಿ ಕೇಂದ್ರ ಕೈಗಾರಿಕೆ ವರ್ಕ್‌ಶಾಪ್(ಸಿ.ಐ.ಡಬ್ಲ್ಯೂ ಮತ್ತು ಹಾಸನದ ಇಂಪ್ಲಿಮೆಂಟ್ಸ್ ವರ್ಕ್‌ಶಾಪ್ ಇವುಗಳನ್ನು ಒಟ್ಟುಗೂಡಿಸಿ ಕಿಂಕೊ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಕಿಂಕೊ ಕಂಪನಿಯು 1986ರ ನಂತರ ಬೆಂಗಳೂರು ಮತ್ತು ಹಾಸನದಲ್ಲಿರುವ ಘಟಕಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ಬಾಡಿ ಕಟ್ಟುವ ಕೆಲಸವನ್ನು ಮಾಡುತ್ತಿದೆ. ಹಲವಾರು ಕಾರಣಗಳಿಂದ ಕಂಪನಿಯು ತೀವ್ರ ನಷ್ಟ ಅನುಭವಿಸುತ್ತಾ ಬಂದು, ಈಗ ಇದರ ಒಟ್ಟು ನಷ್ಟ 1967–74 ಲಕ್ಷ ರೂ.ಗಳು ಆಗಿದೆ.

ಸುಧಾರಿಸದ ಕಾರ್ಖಾನೆಯ ಈ ಪರಿಸ್ಥಿತಿಯನ್ನು ಕಂಡು, ಹಾಗೂ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯ ವರದಿಯನ್ನು ಗಣನೆಗೆ ತೆಗೆದುಕೊಂಡು ಹಾಗೂ ಸಚಿವ ಸಂಪುಟ ಉಪಸಮಿತಿಯ ವರದಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಆದೇಶ ಸಂಖ್ಯೆ:ಸಿಐ.47 ಸಿಐಎಸ್.91 ದಿನಾಂಕ:31–10–1991ರ ಪ್ರಕಾರ ಕಿಂಕೊ ಸಂಸ್ಥೆಯನ್ನು ಮುಚ್ಚಲು ಆದೇಶ ಹೊರಡಿಸಲಾಯಿತು. ತದನಂತರ ಬಿ.ಎಚ್.ಇ.ಎಲ್ ಸಂಸ್ಥೆಯು ಕಿಂಕೊ ಕಾರ್ಖಾನೆಯನ್ನು ತೆಗೆದುಕೊಳ್ಳಲು ತನ್ನ ಆಶಯವನ್ನು ವ್ಯಕ್ತಪಡಿಸಿತ್ತು. ಆದರೆ ಈವರೆಗೆ ತನ್ನ ಅಂತಿಮ ನಿರ್ಧಾರವನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿರುವುದಿಲ್ಲ. ಈ ಮಧ್ಯೆ ಅಂದಿನ ಮುಖ್ಯಮಂತ್ರಿಗಳು ಕಳೆದ ವರ್ಷದ ಆಯವ್ಯಯ ಪತ್ರವನ್ನು ಮಂಡಿಸುವ ಸಮಯದಲ್ಲಿ ಹಾಸನದ ಘಟಕವನ್ನು ಕೃಷಿ ಉಪಕರಣ ತಯಾರಿಕಾ ಘಟಕವಾಗಿ ಜಂಟಿ ವಲಯದಲ್ಲಿ ಬಲಗೊಳಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ಅನುಗುಣವಾಗಿ ಅಭಿವೃದ್ಧಿ ಆಯುಕ್ತರು ಸಭೆಯೊಂದನ್ನು ಕರೆದಿದ್ದರು. ಈ ಸಭೆಯಲ್ಲಿ ಕೆ.ಎಸ್.ಐ.ಐ.ಡಿ.ಸಿಯನ್ನು ಇದಕ್ಕೆ ಸಂಬಂಧಪಟ್ಟಂತೆ ಒಂದು ಕೂಲಂಕುಷವಾದ